

ಅಂಟಿನಂತಹ ಬಿಳಿ ವಸ್ತುವಿನಿಂದಾಗಿ ತಲೆಗೂದಲು ಒಂದಕ್ಕೊಂದು ಅಂಟಿಕೊಂಡಂತಾಗಬಹುದು.

## ಉದರ ದರ್ಶಕ ಪರೀಕ್ಷೆ

ಈ ಪರೀಕ್ಷೆಗೆ ಕಡ್ಡಾಯವಾಗಿ ಖಾಲಿ ಹೊಟ್ಟೆಯಲ್ಲಿಯೇ ಪ್ರಯೋಗಾಲಯಕ್ಕೆ ತೆರಳಬೇಕು. ಪರೀಕ್ಷೆಗೆ ಮೊದಲು ಬಾಯಿಯಲ್ಲಿ ಹಾಕಲು ಅರಿವಳಿಕೆ ಔಷಧವನ್ನು ಕೆಲವೊಮ್ಮೆ ಕುಡಿಸಲಾಗುತ್ತದೆ. ಈ ಪರೀಕ್ಷೆಯಲ್ಲಿ ನಳಿಕೆಯಂತಹ ಪರಿಕರವನ್ನು ಬಾಯಿಯ ಮೂಲಕ ಹೊಟ್ಟೆಗೆ ತೂರಿಸಿ ಅನ್ನನಾಳ, ಜಠರ, ಸಣ್ಣ ಕರುಳಿನ ಮೊದಲರ್ಧದ ಒಳಭಾಗವನ್ನು ಪರದೆಯ ಮೇಲೆ ನೋಡಿ ಸಮಸ್ಯೆಯನ್ನು ಗುರುತಿಸಲಾಗುತ್ತದೆ. ರೋಗ ಪತ್ತೆಗೆಂದು ವೈದ್ಯರು ಬಯಾಪ್ಸಿಗಾಗಿ ಅಂಗಾಂಶದ ತುಣುಕನ್ನೂ ಈ ಪರೀಕ್ಷೆಯ ವೇಳೆಯಲ್ಲಿ ತೆಗೆಯುತ್ತಾರೆ. ಪರೀಕ್ಷೆಯ ನಂತರವೂ ವ್ಯಕ್ತಿಗೆ ವಾಕರಿಕೆಯ ಮತ್ತು ಒಂದು ಬಗೆಯ ಅಹಿತಕರ ಅನುಭವವಾಗಬಹುದು.

## ಟ್ರೆಡ್ ಮಿಲ್ ಪರೀಕ್ಷೆ

ಹೃದಯದ ಕಾರ್ಯಕ್ಷಮತೆಯನ್ನು ಗುರುತಿಸಲು ಮಾಡುವ ಪರೀಕ್ಷೆಗಳಲ್ಲಿ ಇದೂ ಒಂದು. ಹೃದಯಕ್ಕೆ ರಕ್ತ ಪೂರೈಸುವ ರಕ್ತನಾಳಗಳಲ್ಲಿ ತಡೆಯಿದ್ದು, ಹೃದಯಕ್ಕೆ ಶ್ರಮವಾದಾಗ ರಕ್ತ ಪೂರೈಕೆಯಲ್ಲಿ ವ್ಯತ್ಯಯವಾಗಬಹುದೆ ಎಂಬುದನ್ನು ಪತ್ತೆ ಹಚ್ಚಲು ಈ ಪರೀಕ್ಷೆ ಉಪಯುಕ್ತವೆನಿಸುತ್ತದೆ. ಈ ಪರೀಕ್ಷೆಗೆ ಇಪ್ಪತ್ನಾಲ್ಕು ತಾಸುಗಳ ಮೊದಲು ಧೂಮಪಾನ ಅಥವ ಮದ್ಯಪಾನ ಸಲ್ಲದು. ಈ ಪರೀಕ್ಷೆಗೆ ಹೋಗುವ ನಾಲ್ಕು ತಾಸುಗಳ ಮೊದಲೇ ನಿಮ್ಮ ಆಹಾರ ಸೇವನೆಯನ್ನು ಮುಗಿಸಿದ್ದರೆ ಒಳಿತು. ಹಗುರವಾದ ಸಡಿಲ ಉಡುಪು ಸೂಕ್ತ. ಹಿಂದಿನ ದಿನ ತೀವ್ರತರವಾದ ದೇಹದಂಡನೆಯೂ ಒಳ್ಳೆಯದಲ್ಲ. ಪ್ರಶಾಂತ ಮನಸ್ಸಿನಿಂದ ಪರೀಕ್ಷೆಗೆ ಒಳಗಾಗಬೇಕು. ಎದೆ ಮತ್ತು ಹೊಟ್ಟೆಯ ಭಾಗದಲ್ಲಿ ಹತ್ತು ವಿದ್ಯುದ್ವಾರಗಳನ್ನು ಅಂಟಿಸಿರುತ್ತಾರೆ. ಪರೀಕ್ಷೆಯ ಪೂರ್ಣ ಅವಧಿಯಲ್ಲಿ ನಿಮ್ಮ ರಕ್ತದೊತ್ತಡ ಮತ್ತು ಇಸಿಜಿ ಮುದ್ರಿತವಾಗುತ್ತದೆ. ಪರೀಕ್ಷೆಯ ವೇಳೆ ಆಯಾಸ, ಎದೆನೋವು, ತಲೆನೋವು ಮೊದಲಾದ ಯಾವುದೇ ಅಹಿತಕರ ಅನುಭವವಾದರೂ ಕೂಡಲೇ ತಂತ್ರಜ್ಞರ ಗಮನಕ್ಕೆ ತರಬೇಕು.

## ಸಿ.ಟಿ. ಸ್ಕ್ಯಾನ್

ಕ್ಷ ಕಿರಣಗಳನ್ನು ಬಳಸಿ ಮಾಡುವ ಮತ್ತೊಂದು ಪರೀಕ್ಷೆ ಸಿ.ಟಿ. ಸ್ಕ್ಯಾನ್. ಎಕ್ಸ್‌ರೆ ಪರೀಕ್ಷೆಗಿಂತಲೂ ಕಡಿಮೆ ಪ್ರಮಾಣದ ಕ್ಷಕಿರಣಗಳನ್ನು ಇಲ್ಲಿ ಬಳಸಲಾಗುತ್ತದೆ. ವಿವಿಧ ದಿಕ್ಕಿನಿಂದ ಕ್ಷ ಕಿರಣಗಳು ಅಂಗಾಂಗಗಳ ಮೂಲಕ ಹಾಯುವುದರಿಂದ ಬೇರೆ ಬೇರೆ ಸಮತಲಗಳಲ್ಲಿ ಅಂಗಾಂಗಗಳನ್ನು ಚಿತ್ರೀಕರಿಸಬಹುದಾಗಿದೆ. ಹಾಗಾಗಿ ಇದು ಹೆಚ್ಚು ನಿಖರವಾದ ಮಾಹಿತಿಯನ್ನು ಕೊಡುತ್ತದೆ. ಆದರೆ ಈ ಸಲಕರಣೆ ತುಸು ದೊಡ್ಡದಾಗಿರುವುದರಿಂದ ಮತ್ತು ಪರೀಕ್ಷೆ ಮಾಡುವಾಗ ವ್ಯಕ್ತಿ ಒಬ್ಬರೇ ಆ ಕೋಣೆಯಲ್ಲಿ ಇರಬೇಕಾಗಿ ಬರುವುದರಿಂದ ಕೆಲವರು ಭಯ ಪಡುವುದಿದೆ. ಪಕ್ಕದ ಕೋಣೆಯಲ್ಲಿ ತಂತ್ರಜ್ಞರು ಪಾರದರ್ಶಕ ಗಾಜಿನ ಮೂಲಕ ನಿಮ್ಮನ್ನು ಗಮನಿಸುತ್ತಿರುತ್ತಾರೆ, ಹಾಗಾಗಿ ಭಯ ಪಡುವುದು ಬೇಡ. ಸಾಮಾನ್ಯವಾಗಿ ಇಪ್ಪತ್ತರಿಂದ ಮೂವತ್ತು ನಿಮಿಷಗಳೊಳಗಾಗಿ ಪೂರ್ಣಗೊಳ್ಳುವ ಈ ಪರೀಕ್ಷೆಯಲ್ಲಿ ತಂತ್ರಜ್ಞರು ಕೊಡುವ ಸೂಚನೆಗಳನ್ನು ಕೇಳಿಸಿಕೊಂಡು ಸಹಕರಿಸಬೇಕು. ಹೊಟ್ಟೆಯ ಭಾಗದ ತಪಾಸಣೆಯ ಮೊದಲು ಆರರಿಂದ ಎಂಟು ತಾಸುಗಳ ಕಾಲ ಖಾಲಿ ಹೊಟ್ಟೆಯಲ್ಲಿದ್ದರೆ ಕರುಳುಗಳನ್ನು ಸಮರ್ಪಕವಾಗಿ ಗಮನಿಸಬಹುದು. ನೀವು ಈ ಮೊದಲು ಸಿ.ಟಿ. ಸ್ಕ್ಯಾನ್ ಮಾಡಿಸಿದ್ದರೆ ಎಲ್ಲ ಹಳೆಯ ವರದಿಗಳನ್ನು ತಪ್ಪದೇ ನಿಮ್ಮೊಂದಿಗೆ ತರಬೇಕು.

## ಎಂ.ಆರ್.ಐ. ಸ್ಕ್ಯಾನ್

ಶರೀರದ ಜೀವಕೋಶಗಳ ಅಯಸ್ಕಾಂತ ಗುಣವನ್ನು ಬಳಸಿ ಮಾಡುವ ಇದು ಒಂದು ಸುರಕ್ಷಿತವಾದ ಪರೀಕ್ಷೆ. ಇಲ್ಲಿ ಅಂಗಾಂಶಗಳ ಬಿಂಬ ಮೂಡಲು ಶರೀರದಲ್ಲಿನ ಹೈಡ್ರೋಜನ್ ಕಣಗಳನ್ನು ಉಪಯೋಗಿಸುವುದರಿಂದ, ಸೂಕ್ಷ್ಮ ದೋಷಗಳನ್ನೂ ಸುಲಭವಾಗಿ ಗುರುತಿಸಬಹುದು. ಆದರೆ, ಇದರಲ್ಲಿ ಬಳಸುವ ಬಹು ದೊಡ್ಡದಾದ ಉಪಕರಣ ಮತ್ತು ಅಲ್ಲಿ ಮೂಡುವಂತಹ ಜೋರಾದ ಶಬ್ದ, ಆ ಹವಾನಿಯಂತ್ರಣ ವಾತಾವರಣ ಕೆಲವರಿಗೆ ಗಾಬರಿ ಹುಟ್ಟಿಸುವುದಿದೆ. ಹಾಗಾಗಿಯೇ ಕೆಲವರು ಈ ಪರೀಕ್ಷೆಗೆ ಹೋಗುವ ಮುನ್ನ ಭಯಭೀತರಾಗುತ್ತಾರೆ. ಆದರೆ ಈ ಪರೀಕ್ಷೆಯಲ್ಲಿ ಯಾವುದೇ ನೋವು ಅಥವಾಅಹಿತಕರ ಅನುಭವವಾಗುವುದಿಲ್ಲ. ಸುಮಾರು ಮೂವತ್ತು ನಿಮಿಷಗಳು ತಗಲುವ ಈ ಪರೀಕ್ಷೆಯ ವೇಳೆ ಮೂಡುವ ಕರ್ಕಶ ಶಬ್ದದಿಂದ ಪಾರಾಗಲು ವ್ಯಕ್ತಿಗೆ ಕಿವಿಯಲ್ಲಿರಿಸಲು ಹತ್ತಿ ಅಥವಾ ಸಣ್ಣ ಪ್ಲಾಸ್ಟಿಕ್ ತುಂಡುಗಳನ್ನು ಕೊಡಲಾಗುತ್ತದೆ.

ಪರೀಕ್ಷೆಗೆ ಮೊದಲು ವ್ಯಕ್ತಿಯಿಂದ ಕೆಲವು ಮಾಹಿತಿಯನ್ನು ವಿಕಿರಣ ತಂತ್ರಜ್ಞರು ಬಯಸುತ್ತಾರೆ. ಅದರಲ್ಲಿ ಮುಖ್ಯವಾದದ್ದು ವ್ಯಕ್ತಿ ಈ ಮೊದಲು ಯಾವುದಾದರೂ ಶಸ್ತ್ರಚಿಕಿತ್ಸೆಗೆ ಒಳಗಾಗಿರುವುದರ ಬಗ್ಗೆ ಮತ್ತು ಆ ಸಂದರ್ಭದಲ್ಲಿ ಲೋಹದ ವಸ್ತುವನ್ನು ದೇಹದಲ್ಲಿ ಜೋಡಿಸಿರುವುದರ ಬಗ್ಗೆ. ಕೆಲವು ಲೋಹದ ವಸ್ತುಗಳು ಉದಾಹರಣೆಗೆ, ಮೂಳೆ ಮುರಿತದ ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಲೋಹದ ಸರಳು, ಮತ್ತು ಹೃದಯಕ್ಕೆ ಅಳವಡಿಸುವ ಪೇಸ್ ಮೇಕರ್ ಮೊದಲಾದುವು ದೇಹದಲ್ಲಿ ಇದ್ದಾಗ ಅಂತಹ ವ್ಯಕ್ತಿಗಳು ಎಂ.ಆರ್.ಐ. ಸ್ಕ್ಯಾನ್ ಮಾಡಿಸಿದರೆ ಅಪಾಯವಿರುತ್ತದೆ. ಹಾಗಾಗಿಯೇ ಈ ಬಗ್ಗೆ ಸರಿಯಾದ ಮಾಹಿತಿಯನ್ನು ರೋಗಿ ಮತ್ತು ಅವರ ಸಂಬಂಧಿಗಳು ತಂತ್ರಜ್ಞರಿಗೆ ಕೊಡಬೇಕಾಗುತ್ತದೆ.

(ಲೇಖಕಿ ಶಿವಮೊಗ್ಗದಲ್ಲಿ ಪೆಥಾಲಜಿಸ್ಟ್)



## ಕ್ಷ ಕಿರಣ (ಎಕ್ಸ್‌ರೆ) ಪರೀಕ್ಷೆ

ದೇಹದ ಯಾವುದೇ ಭಾಗದ ಎಕ್ಸ್‌ರೆ ತಪಾಸಣೆಯ ಸಮಯದಲ್ಲಿ ಲೋಹದ ಅದರಲ್ಲಿಯೂ ಕಬ್ಬಿಣದ ವಸ್ತುಗಳನ್ನು ಧರಿಸಿರಬಾರದು. ಪಿನ್ನು, ಕಬ್ಬಿಣದ ಗುಂಡಿಗಳು, ಆಭರಣಗಳು, ತಲೆಗೂದಲಿನ ಕ್ಲಿಪ್ ಮೊದಲಾದುವುಗಳನ್ನು ತೆಗೆದಿಡಬೇಕು. ಹೊಟ್ಟೆಯ ಭಾಗದ ತಪಾಸಣೆಯ ಮೊದಲು ಆರರಿಂದ ಎಂಟು ತಾಸುಗಳ ಖಾಲಿ ಹೊಟ್ಟೆಯಲ್ಲಿದ್ದರೆ ಮೂತ್ರ ಪಿಂಡಗಳ ಹರಳುಗಳನ್ನು ಗಮನಿಸುವುದು ಸುಲಭವಾಗುತ್ತದೆ. ತಂತ್ರಜ್ಞರು ಸೂಚಿಸುವ ಸ್ಥಿತಿಯಲ್ಲಿಯೇ ಇದ್ದು ಸಹಕರಿಸಬೇಕು.